# ನಕ್ಕುಬಿಡಿ..!



ಯುವ ನರ್ಸ್: ಸರ್, ನಾನು ಇವರ ನಾಡಿ ಪರೀಕ್ಷೆ ಮಾಡುವಾಗಲೆಲ್ಲ ಇವರ ನಾಡಿ ಬಡಿತ ಹೆಚ್ಚಾಗಿರತ್ತೈತಿ. ಅವರಿಗೆ ಏನು ಔಷಧಿ ಕೊಡಲಿ?

ವೈದ್ಯ: ಅವನಿಗೆ ಬೇಕಾಗಿರುವುದು ಔಷಧಿಯಲ್ಲ, ನೀನು ಹೋಗಿ ಅವನ ನಾಡಿ ನೋಡಾಕ ಹಿರಿಯ ನರ್ಸ್ ಬಾಯಾರನ್ನು ಕಳಿಸು!

★★★

ತಂದೆ: ವೈದ್ಯರೇ ನನ್ನ ಮಗನ ಪರಿಸ್ಥಿತಿ ಹ್ಯಾಂಗದ?

ವೈದ್ಯರು: ಈಗ ಪರವಾಗಿಲ್ಲ, ನರ್ಸ್ ಬಳಿಗೆ ಬಂದಾಗಲೆಲ್ಲ ಕಣ್ಣು ತೆಗೆದು ನೋಡತಾನ್ರೀ!

★★★

ರೋಗಿ: ಡಾಕ್ಟರ್ ಸಾಹೇಬ್ರ, ಇದು ನನ್ನ ಮೊದಲ ಆಪರೇಶನ್. ನನಗ ಭಾಳ ಹೆದರಿಕೆ ಆಗ್ಲಿಕ್ಕ ಹತ್ತೇದ..

ವೈದ್ಯ: ಚಿಂತಿ ಮಾಡಬ್ಯಾಡಪ್ಪ.. ನನ್ಹಂಗೆ ದೇವರ ಮ್ಯಾಲೆ ಭಾರ ಹಾಕು.

ರೋಗಿ: ಅಂದ್ರೆ?

ವೈದ್ಯ: ನಂದೂ ಇದ ಮೊದಲನೆ ಆಪರೇಶನ್!

ಸಂಗ್ರಹ: ಬಸವರಾಜ ಹುಡೇದಗಡ್ಡಿ, ಚಾಮರಾಜನಗರ

ರೋಗಿ: ರೀ ಸಿಸ್ಟರ್, ಅಪರೇಶನ್ ಮಾಡೂ ಮುಂದ ಡಾಕ್ಟರ್ ಸ್ಪಂಜ ಒಳಗ ಬಿಟ್ಟಾರೇನರಿ?

ದಾದಿ: ಯಾಕ ನೋವಾಗ್ತದೇನರಿ?

ರೋಗಿ: ಇಲ್ಲರೀ.. ಭಾಳ ನೀರಡಕಿ ಆಗ್ಲಿಕ್ಕೆ ಹತ್ತೈತಿ!

★★★

ರೋಗಿ: ಡಾಕ್ಟರ್ ಸಾಹೇಬ್ರ.. ನನ್ನ ಬಲಗೈ ಭಾಳ ಹರೀತದ ನೋಡ್ರಿ.

ವೈದ್ಯರು: ಚಿಂತಿಯಾಕ ಮಾಡ್ತೀರಿ? ವಯಸ್ಸಾಗಿದ್ದರಿಂದ ಹರೀತದ..

ರೋಗಿ: ಅದ ಹ್ಯಾಂಗರೀ, ನನ್ನ ಎಡಗೈಗೂ ಅಷ್ಟಾ ವಯಸ್ಸಾಗೈತಿ, ಅದ್ಯಾಕ ಹರೀವಲ್ದು?

★★★



## ತರ್ಲೆ ಪ್ರಶ್ನೋತ್ತರ



★ ಸ್ಟವ್ ಸಿಡಿಯುವುದು ಯಾವಾಗ?
ವರದಕ್ಷಿಣೆ ತರದಿದ್ದಾಗ!

★ ದೇಶಾದ್ಯಂತ ಕ್ರಿಕೆಟ್ ಮ್ಯಾಚ್ ಆರಂಭವಾಗುವುದು ಯಾವಾಗ?
ಶಾಲಾ ಕಾಲೇಜು ಪರೀಕ್ಷೆ ಪ್ರಾರಂಭವಾದಾಗ!

★ ನೌಕರಿಗೆ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವುದು ಯಾವಾಗ?
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಹತ್ತಿರ ಬಂದಾಗ!

★ ಅರೆಶಿಕ್ಷಿತರು ಇಂಗ್ಲಿಷ್ ಮಾತನಾಡುವುದು ಯಾವಾಗ?
ಸೆರೆ ಕುಡಿದಾಗ!

★ ಕರ್ನಾಟಕದ ಜನಸಂಖ್ಯೆ ಕಡಿಮೆಯಾಗುವುದು ಯಾವಾಗ?
ಅದಿರು ಲಾರಿಗಳು ಮತ್ತೆ ರಸ್ತೆಗಿಳಿದಾಗ!

ಸಂಗ್ರಹ: ದೇವಿದಾಸ ಸುವರ್ಣ ಅಂಕೋಲಾ

ಸಹಿಸಲಸಾಧ್ಯವಾದ
ಸಂಧಿ ನೋವೆ?
...ಮೂಲದಿಂದಲೆ ಔಷದೋಪಚಾರ ಮಾಡಿ.



ಸಾಧಾರಣ ನೋವಿನ ಎಣ್ಣೆ ಇಲ್ಲವೆ ಮೂಲಾಮು, ಮಾತ್ರೆಗಳಿಂದ ಕೇವಲ ಸಾಂದರ್ಭಿಕ ಹಾಗೂ ಕ್ಷಣಿಕ ಗುಣ ಕಾಣಬಹುದು.

ಕೇವಲ ಬೈಧ್ಯನಾಥ್ ರೂಮಾರ್ಥೊ ಗೋಲ್ಡ್ ಪ್ಲಸ್ ಒಂದು ಪ್ರಯೋಗಿಸಲ್ಪಟ್ಟ ಹಾಗೂ ಪ್ರಮಾಣೀಕೃತ ಆಯುರ್ವೇದೀಯ ತಯಾರಿಕೆಯಾಗಿದ್ದು ಇದರಲ್ಲಿರುವ ಸ್ವರ್ಣಭಸ್ಮ ಮತ್ತು ಸಲಾಯಿ ಗುಗ್ಗುಲು ನೋವು ನಿವಾರಣೆ ಮತ್ತು ಕಾಯಿಲೆಯು ಉಲ್ಬಣಗೊಳ್ಳದಂತೆ ತಡೆಯುವುದ ರೊಂದಿಗೆ ಈ ತೊಂದರೆಗೆ ಕಾರಣವನ್ನು ಮೂಲದಿಂದಲೇ ನಿವಾರಿಸಿ ಸಂಧಿವಾತ, ಆಮವಾತ, ಸೈಯಾಟಿಕ, ವೆರಿಕೋಸ್-ವೆಯಿನ್ಸ್, ಸ್ಪಾಂಡಿಲೈಟಿಸ್, ಮಾಂಸಖಂಡಗಳ ನೋವು ನಿವಾರಣೆಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತದೆ.

ಬೈದ್ಯನಾಥ್
ರೂಮಾರ್ಥೊ
ಗೋಲ್ಡ್ ಪ್ಲಸ್
ರ್‍ಹೂಮ
ಆಯಿಲ್
ನ್ಯೂ ಸ್ಟ್ರಾಂಗ್ ಫಾರ್ಮುಲಾ
ಶೀಘ್ರ ಉಪಶಮನ,
ಸಂಪೂರ್ಣ ನಿವಾರಣೆ.